# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 743. |
| ಸದಸ್ಯರ ಹೆಸರು | ಶ್ರೀ ಬಿ ಜಿ ಪಾಟೀಲ್, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21.08.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿ ಜಿಲ್ಲೆಯ ಶಹಪುರ ತಾಲ್ಲೂಕಿನ ವಿಭೂತಿಹಳ್ಳಿ ಗ್ರಾಮದ ಸರ್ಕಾರಿ ಸರ್ವೆ ನಂ. 56ರ ವ್ಯಾಪ್ತಿಯಲ್ಲಿ ಮಿಷನ್ ಅಮೃತ್ ಸರೋವರ್ ಯೋಜನೆಯಡಿ ಕೆರೆ ನಿರ್ಮಾಣ ಕಾಮಗಾರಿ ಹೆಸರಿನಲ್ಲಿ ಖಾಸಗಿ ಗುತ್ತಿಗೆದಾರರು ಲಕ್ಷಾಂತರ ರೂಪಾಯಿ ಮೌಲ್ಯದ ಮುರಂ ಖನಿಜವನ್ನು ಖಾಸಗಿ ಕಾಮಗಾರಿಗೆ ಬಳಸಿಕೊಂಡು ಸರ್ಕಾರಕ್ಕೆ ಸಲ್ಲಬೇಕಿದ್ದ "ರಾಜಧನ" ತಪ್ಪಿಸಿ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | • ಗದಗ-ವಾಡಿ ರೈಲ್ವೆ ಕಾಮಗಾರಿಗೆ ಅವಶ್ಯವಿರುವ ಮುರ್‍ರಂ ಉಪಖನಿಜದ ಸರಬರಾಜಿಗೆ ಕಾಮಗಾರಿ ಗುತ್ತಿಗೆದಾರರಾದ ಮೆ\|\| ಎಂ.ಕೆ.ಸಿ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ರವರಿಗೆ ಮಿಷನ್ ಅಮೃತ ಸರೋವರ ಯೋಜನೆಯಡಿಯಲ್ಲಿ ಶಹಾಪೂರ ತಾಲ್ಲೂಕಿನ ವಿಭೂತಿಹಳ್ಳಿ ಗ್ರಾಮದ ಸರ್ವೆ ನಂ.56 & 80 ರಲ್ಲಿನ ಕೆರೆಯ 05-00 ಎಕರೆ ವಿಸ್ತೀರ್ಣದಲ್ಲಿ ಅಂತರ್ಜಲ ಇಲಾಖೆ, ಕಂದಾಯ ಇಲಾಖೆ, ತಾಲ್ಲೂಕು ಪಂಚಾಯತ್ ಶಹಾಪೂರ ಇವರಿಂದ ನಿರಾಕ್ಷೇಪಣಾ ಪತ್ರ ಪಡೆದು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಮುರ್‍ರಂ ತೆಗೆಯಲು ದಿನಾಂಕ: 01-01-2026 ರಂದು ಅನುಮತಿ ನೀಡಲಾಗಿದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು – 2025ರ ನಿಯಮ-3-A(a) ರಂತೆ ರಾಷ್ಟ್ರೀಯ ಹೆದ್ದಾರಿ, ರೈಲ್ವೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಮೃತ್ ಸರೋವರ್ ಯೋಜನೆಯಡಿ ಕೆರೆಗಳಲ್ಲಿ ಮುರ್‍ರಂ ತೆಗೆಯಲು ಅನುಮತಿ ನೀಡಿದ ಪ್ರಕರಣಗಳಲ್ಲಿ ರಾಜಧನ, ಹೆಚ್ಚುವರಿ ಪಾವತಿ ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ ಪಾವತಿಗೆ ಹಾಗೂ ಖನಿಜ ರವಾನೆ ಪರವಾನಗಿ ಪಡೆಯುವುದಕ್ಕೆ ವಿನಾಯಿತಿ ಇರುತ್ತದೆ. |
| ಆ) | ಕೆರೆಯಿಂದ ಹೊರ ತೆಗೆಯುವ ಮುರಂ ಅನ್ನು ಕೇವಲ ಸರ್ಕಾರದ ಅನುಮೋದಿತ ಕಾಮಗಾರಿಗಳಿಗೆ ಮಾತ್ರ ಬಳಸಬೇಕೆಂಬ ಷರತ್ತು ಇದ್ದರೂ ಸ್ಥಳದಲ್ಲಿ ಸಮರ್ಪಕ ಮೇಲ್ವಿಚಾರಣೆ ಇಲ್ಲದ ಕಾರಣ ಅನಧಿಕೃತ ಸಾಗಾಣಿ ಮತ್ತು ದುರ್ಬಳಕೆ ಶಂಕೆ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ತನಿಖೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದೇ: (ವಿವರ ನೀಡುವುದು) | • ಮಿಷನ್ ಅಮೃತ್ ಸರೋವರ್ ಯೋಜನೆಯಲ್ಲಿ ಕೆರೆಗಳಲ್ಲಿ ಮುರ್‍ರಂ ತೆಗೆಯಲು ಅನುಮತಿ ನೀಡಿದ ಪ್ರಕರಣಗಳಲ್ಲಿ ನಿಗಧಿಪಡಿಸಿರುವ ರಾಷ್ಟ್ರೀಯ ಹೆದ್ದಾರಿ ಅಥವಾ ರೈಲ್ವೆ ಕಾಮಗಾರಿಯಲ್ಲಿ ಮಾತ್ರ ಬಳಸಬೇಕಾಗಿದೆ. ಸದರಿ ಕಾಮಗಾರಿಗಳನ್ನು ಹೊರತುಪಡಿಸಿ ಇತರೆ ಕಾಮಗಾರಿಗಳಿಗೆ ಮುರ್‍ರಂ ಸಾಗಾಣಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲ. ಕಾರ್ಯಾನುಮತಿ ನೀಡಿದ ಪ್ರದೇಶದಿಂದ ಮುರ್‍ರಂ ಖನಿಜವನ್ನು ಗದಗ-ವಾಡಿ ರೈಲ್ವೆ ಕಾಮಗಾರಿಗೆ ಮಾತ್ರ ಬಳಸಿರುವುದು ಕಂಡುಬಂದಿದೆ. ಮುರ್‍ರಂ ಉಪಖನಿಜವನ್ನು ಯಾವುದೇ ಖಾಸಗಿ ಕಾಮಗಾರಿಗಳಿಗೆ ಬಳಸಿ ದುರ್ಬಳಕೆಯಾಗಿಲ್ಲ. |
| ಇ) | ಕೂಡಲೇ ಸರ್ಕಾರ ಜಿಲ್ಲಾಧಿಕಾರಿ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳನ್ನು ಸ್ಥಳಕ್ಕೆ ಭೇಟಿ ನೀಡಿ ವರದಿ ತರಿಸಿ ರಾಜಧನ | • ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು- 2025ರ ನಿಯಮ-3-A(a)ರಂತೆ ರಾಷ್ಟ್ರೀಯ ಹೆದ್ದಾರಿ, ರೈಲ್ವೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಮೃತ್ ಸರೋವರ್ |

| | | |
|---|---|---|
| | ವಿನಾಯಿತಿ ಆದೇಶವನ್ನು ಮರುಪರಿಶೀಲಿಸಿ ಬೊಕ್ಕಸಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಯೋಜನೆಯಡಿ ಕೆರೆಗಳಲ್ಲಿ ಮುರ್ರಂ ತೆಗೆಯಲು ಅನುಮತಿ ನೀಡಿದ ಪ್ರಕರಣಗಳಲ್ಲಿ ರಾಜಧನ, ಹೆಚ್ಚುವರಿ ಪಾವತಿ ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ ಪಾವತಿಗೆ ಹಾಗೂ ಖನಿಜ ರವಾನೆ ಪರವಾನಿಗೆ ಪಡೆಯುವುದಕ್ಕೆ ವಿನಾಯಿತಿ ಇದೆ.<br>• ವಿಭೂತಿಹಳ್ಳಿ ಗ್ರಾಮದ ಸರ್ವೆ ನಂ.56 & 80ರ ಪ್ರದೇಶಕ್ಕೆ ಅನುಮತಿ ನೀಡಲಾಗಿದ್ದು 05-00 ಎಕರೆ ಪ್ರದೇಶಕ್ಕೆ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಸ್ಥಳ ಪರಿಶೀಲಿಸಿದ್ದು, ಪ್ರಸ್ತುತ ಸದರಿ ಪ್ರದೇಶದಲ್ಲಿ ಮುರ್ರಂ ಗಣಿಗಾರಿಕೆ ಚಟುವಟಿಕೆ ಮಾಡುತ್ತಿರುವುದು ಕಂಡುಬಂದಿರುವುದಿಲ್ಲ.<br>• ಕಾರ್ಯಾನುಮತಿದಾರರು ಕಾರ್ಯಾನುಮತಿ ನೀಡಿದ ಪ್ರದೇಶವನ್ನು ಹೊರತುಪಡಿಸಿ ಸರ್ಕಾರಿ ಸರ್ವೆ ನಂ.56 ರಲ್ಲಿ ಅಂದಾಜು 3500 ಮೆಟ್ರಿಕ್ ಟನ್ ಹಾಗೂ ಪಟ್ಟಾ ಸರ್ವೆ ನಂ.58 ರಲ್ಲಿ ಅಂದಾಜು 10500 ಮೆಟ್ರಿಕ್ ಟನ್ ಅಕ್ರಮವಾಗಿ ಮುರ್ರಂ ಗಣಿಗಾರಿಕೆ ಮಾಡಿ ಸಾಗಾಣಿಕೆ ಮಾಡಿರುವುದು ಕಂಡುಬಂದಿದ್ದು, ಈ ಕುರಿತು ಸದರಿ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ / ಸಾಗಾಣಿಕೆ ಮಾಡಿರುವವರ ವಿರುದ್ಧ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. |

ಸಂಖ್ಯೆ: ಸಿಐ-ಎಂಎಂಎನ್/346/2026

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು